## ಕಲ್ಲಿನ ಕಳಸ

ನೂರಾರು ವರ್ಷಗಳ ಹಿಂದಿನ ಕಲ್ಲಿನ ಕಳಸ. ಇದು ಬೆಳವಾಡಿಯಲ್ಲಿರುವ ಉದ್ಭವ ಗಣಪತಿ ದೇವಾಲಯದ ಪ್ರವೇಶ ದ್ವಾರದಲ್ಲಿದ್ದು ಈ ವಿಶಿಷ್ಟ ಕಲ್ಲಿನ ಕಳಸ ಅಪರೂಪದ್ದು.

**-ಎಚ್.ಎಸ್. ಪದ್ಮಾವತಿ, ಹಾಸನ**





## ಭತ್ತದ ತೆನೆಯ ರಥ

ಕೃಷಿ ಉತ್ಸವ, ಕೃಷಿ ಸಮಾವೇಶಗಳೆಂದರೆ ಅಲ್ಲಿ ರೈತರನ್ನು ಆಕರ್ಷಿಸುವ ದೃಶ್ಯಗಳು ಸಾಮಾನ್ಯ. ಇದರಂತೆ ತೀರ್ಥಹಳ್ಳಿ ತಾಲ್ಲೂಕಿನ ಬಸವಾನಿಯಲ್ಲಿ ನಡೆದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕೃಷಿ ಉತ್ಸವದಲ್ಲಿ ಭತ್ತದ ತೆನೆಯಿಂದ ಮಾಡಿದ ರಥ ಎಲ್ಲರನ್ನೂ ಆಕರ್ಷಿಸಿತು. ಭತ್ತದ ತೆನೆಯನ್ನು ಸೂಕ್ಷ್ಮವಾಗಿ ಜೋಡಿಸಿ ರಥದ ಮೆರಗು ನೀಡಿದ್ದು ಶ್ರೀಕ್ಷೇತ್ರ ಯೋಜನೆಯ ಮೇಳಿಗೆ ಊರಿನವರು.

**-ರಾಂಚಂದ್ರ ಕೊಪ್ಪಲು, ತೀರ್ಥಹಳ್ಳಿ**

## ಪರಿಮಳದ ಕೇದಗೆ

ಸುಗಂಧ ಬೀರುವ ಹೂವುಗಳ ಸಾಲಲ್ಲಿ ಕೇದಗೆ ವಿಶಿಷ್ಟ ಸ್ಥಾನ ಪಡೆದಿದೆ. ಇದರ ಸಸ್ಯಶಾಸ್ತ್ರೀಯ ಹೆಸರು ಪಾಂಡಾನಸ್ ಒಡೋರಿಫರ್. ಸ್ಕ್ರೂ ಪೈನ್, ಕೇತಕಿ, ಕೇವ್ರಾ, ಕೇವ್‌ಡಾ, ಕೇದಾಯಿಪೂ, ಕೈದಪ್ಪೂ ಎಂಬ ಹೆಸರುಗಳೂ ಇವೆ. ನದಿ, ತೊರೆಗಳ ಇಕ್ಕೆಲಗಳಲ್ಲಿ, ಬನಗಳಲ್ಲಿ, ಪಶ್ಚಿಮ ಘಟ್ಟಗಳ ತಪ್ಪಲು.. ಹೀಗೆ ಧಾರಾಳ ನೀರಿನಾಶ್ರಯ ಇರುವಲ್ಲಿ ತಾಳೆಮರವನ್ನು ಹೋಲುವ ಕೇದಗೆಮರ ನಾಲ್ಕು ಮೀಟರ್ ಎತ್ತರ ಬೆಳೆಯುತ್ತದೆ. ಅಂಚಿನಲ್ಲಿ ಮುಳ್ಳುಗಳಿರುವ ಎಲೆಗಳ ತುದಿಯಲ್ಲಿ ಬಿಳಿ ಅಥವಾ ಹಳದಿ ಬಣ್ಣದ (ಸ್ವರ್ಣ ಕೇದಗೆ) ಹೂಗಳು ಗೊಂಚಲುಗಳಲ್ಲಿ ಬೇಸಿಗೆಯಲ್ಲಿ ಅರಳುತ್ತವೆ.

ಕೇದಗೆ ಹೂವಿನ ಸುಗಂಧಕ್ಕೆ ಮಾರುಹೋಗುವ ಸ್ತ್ರೀಯರು ಹೂವಿನ ಎಸಳನ್ನು ಮಡಚಿ ತೆಂಗಿನ ಗರಿಯ ಕಡ್ಡಿಯಿಂದ ಚುಚ್ಚಿ ಮುಡಿದುಕೊಳ್ಳುತ್ತಾರೆ. ಕೇದಗೆಯ ಎಲೆಗಳಿಗೂ ಸುಗಂಧ ಇದೆ. ಅಷ್ಟಮಿಯಂದು ಎಲೆಗಳಿಂದ ಮೂಡೆ ಕಟ್ಟಿ ಉದ್ದಿನ ಕಡುಬು ಮಾಡಿ ಸವಿಯುತ್ತಾರೆ. ಅಗರಬತ್ತಿ, ಸಿಹಿ ತಿಂಡಿಗಳು ಹಾಗೂ ಮಾಂಸದ ಅಡುಗೆಯಲ್ಲಿ ಕೇವ್‌ಡಾ ತೈಲ ಹಾಗೂ ಅರ್ಕಗಳ ಉಪಯೋಗ ಇದೆ. ಕೇದಗೆಯ ಎಲೆಯ ಮುಳ್ಳನ್ನು ಸವರಿ ಹಳ್ಳಿಗಳಲ್ಲಿ ಸೊಗಸಾದ ಚಾಪೆ ತಯಾರಿಸುತ್ತಾರೆ.

**ಚಿತ್ರ- ಬರಹ:**
**ಡಾ. ವೇಣುಗೋಪಾಲ ಶರ್ಮಾ, ಗುರುವಾಯನಕೆರೆ**

